ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-3, ಸಂಚಿಕೆ-3 ತ್ರೈಮಾಸಿಕ, ಜುಲೈ-ಸೆಪ್ಟೆಂಬರ್ 2016 ಪುಟಗಳು-12



## ವರ್ಷಧಾರೆ ತಂದ ಹರ್ಷಧಾರೆ

- ಬದಲಾಗಲಿವೆ ಬೆಂಗಳೂರಿನ ಟ್ರಾನ್ಸ್‌ಫಾರ್ಮರ್‌ಗಳು...
- ಸರ್ಕಾರೇತರ ಸಂಸ್ಥೆಗಳಿಂದ ವಿದ್ಯುತ್ ಜಾಗೃತಿ ಅಭಿಯಾನ...
- ಪ್ರತಿಭಾವಂತ ವಿದ್ಯಾರ್ಥಿ ಸುದರ್ಶನ್ ಸಾಧನೆ....

.....ಇನ್ನು ಹಲವು ವಿಷಯಗಳೊಂದಿಗೆ

# ಬೆಸ್ಕಾಂನಲ್ಲಿ ಆಚರಿಸಲಾದ ಮಹಿಳಾ ದಿನಾಚರಣೆಯ ಕೆಲ ಚಿತ್ರಗಳು




















**2015–16ನೇ ಸಾಲಿನ ಕೆಎಸ್‌ಸಿಎ ಗ್ರೂಪ್–2, 2ನೇ ವಿಭಾಗದ ಲೀಗ್ ಪಂದ್ಯದಲ್ಲಿ ಸೆಮಿಫೈನಲ್‌ನಲ್ಲಿ ಭಾಗವಹಿಸಿರುವ ಬೆಸ್ಕಾಂ ಕ್ರಿಕೆಟ್ ತಂಡ.**

# MESSAGE FROM MANAGING DIRECTOR



Pankaj Kumar Pandey
Managing Director

During July 2013, I joined BESCOM as Managing Director. As you all know now I am holding additional charge as MD of BESCOM and full charge as CEO and Member of KIADB. I have completed almost 3 years in BESCOM. It is indeed a great pleasure working with entire team of BESCOM.

During the last 2 ½ years, some of the important achievements what we have made are:

1) DAS project to automate the 11 kV Distribution network in Bangalore City (BMAZ area). The progress of DAS is considerably increased and the planned targets are met.
2) To expand the automation down to consumer level and to create smart environment for the consumers, 3 Smart Grid pilot projects are initiated in Indiranagar, Chandapura and Electronic city.
3) Under RAPDRP project, all the 15 module works are completed and other two modules viz., Energy Auditing and Meter Data Acquisition are nearing completion. The maximum progress happened in the last 3 years.
4) Bangalore is credited as the first town in India under RAPDRP to complete the GIS sign off of the Consumer and Network Asset survey and validation to this volume of network and consumers
5) Implementation of Pre-paid metering system, using Card Technology to LT7 consumers on a Pilot basis at Indiranagar Division.
6) Implementation of SCADA Data Reporting Analysis (SDRA), which enables analysis of the huge volume of data recorded by SCADA System.
7) Upon various representations and complaints received from public regarding protrusion of horizontal angle provided for operation of the GOS in distribution transformers erected on foot path causing obstruction to the public, decision was made to modify and replace 60000 GOS across BESCOM and 58000 GOS replacement is completed.
8) New structural design for DTCs finalised. This results in Safety to public, occupy less space, aesthetic and ergonomics. Transformer centre designed to facilitate operations, maintenance, inspection, cleaning and repairs on transformer and accessories.
9) For rural areas we have introduced Android based Billing through optical port.
10) For rural areas, On spot Bill Collection facility is extended.
11) Introduced GPS and GPRS Meter Readers Tracking System.
12) The Financial Dashboard is developed for evaluating performance in the core areas of Revenue including Energy Accounting & Financial Standing.
13) Surya Raitha Scheme is launched in Harobele village, Kanakapura taluk, Ramanagara district and it is nearing completion.
14) From 2014-15 to 2016-17, 468 Solar Rooftop PV installations commissioned with kWp capacity of 9905.25.
15) Establishment of Technical Innovative Cell at Corporate office to handle R&D activities and adoption of emerging technologies.
16) Establishing additional 15 seater in-house Call Centre in addition to the existing 30 seater. 9 Circle Control rooms were established for the speedy redressal of all consumer complaints.
17) Updation and modifications to BESCOM Website to facilitate consumers.
18) Carried out Branding for all the service station vehicles.
19) Electrical safety and Energy savings awareness programs were conducted at the Corporate Office level and also at Circle and at the Sub division level.
20) Consumer Awareness Workshops and Street plays are being conducted at 201 Hoblis of BESCOM area through empanelled NGOs.
21) Simplified and modified various Service Forms and Notices to facilitate consumers and also field officers.
22) In last 3 years 87 No. of AEs, 13 No. of AAOs, 24 Nos. of JEs, 249 No. of Assistants, 284 No. of Junior Assistants, 1392 No. of Line men and 1275 No. of Junior Line men were recruited to fill up the vacancies in BESCOM.
23) For the financial year 2013-14, BESCOM has made Profit of Rs.76.10 Cr and for the financial year 2014-15, Rs.113.44 Cr.
24) Introduced Mobile Application for Online Payment.
25) Online payments made compulsory from 01.04.2016 for all HT Consumers.

# ಸಂಪಾದಕೀಯ...



ಆತ್ಮೀಯರೇ,

ಉತ್ತಮ ಮುಂಗಾರು ಮಳೆಯ ನಿರೀಕ್ಷೆಯಲ್ಲಿ ನಾವು ಜುಲೈ ತಿಂಗಳಿಗೆ ಕಾಲಿಟ್ಟಿದ್ದೇವೆ. ಕಳೆದ ವರ್ಷ ನಿರೀಕ್ಷೆಯಷ್ಟು ಮಳೆ ಬೀಳಲಿಲ್ಲ. ಕೆಲವೇ ಕೆಲವು ಜಲಾಶಯಗಳು ಭರ್ತಿಯಾಗಿದ್ದವು.

ಜಲವಿದ್ಯುತ್ ಉತ್ಪಾದನೆಯನ್ನು ಅವಲಂಬಿಸಿರುವ ಬಹುತೇಕ ಜಲಾಶಯಗಳು ತುಂಬದೇ ನೀರಿನ ಕೊರತೆ ಎದುರಿಸಿದವು. ಪರಿಣಾಮವಾಗಿ ಅಗತ್ಯಕ್ಕೆ ತಕ್ಕಷ್ಟು ವಿದ್ಯುತ್ ಉತ್ಪಾದನೆ ಆಗಲಿಲ್ಲ.

ಆದರೆ ಈ ಬಾರಿ ವಾಡಿಕೆಗಿಂತ ಹೆಚ್ಚಿನ ಮಳೆ ಬೀಳುವುದೆಂಬ ಮುನ್ಸೂಚನೆ ಹವಾಮಾನ ಇಲಾಖೆಯಿಂದ ಬಂದಿದೆ. ಮುಂದಿನ ದಿನಗಳಲ್ಲಿ ಅದರ ಪರಿಣಾಮ ತಿಳಿಯಲಿದೆ.

ಏನೇ ಆದರೂ ಮಳೆಗಾಲ ಎಂದರೆ ವಿದ್ಯುತ್ ಇಲಾಖೆಗೆ ಸವಾಲಿನ ಸಂದರ್ಭ. ಕೆಲವೊಮ್ಮೆ ಭಾರಿ ಮಳೆಗೆ ಮರಗಳು ವಿದ್ಯುತ್ ತಂತಿ ಹಾಗೂ ಕಂಬಗಳ ಮೇಲೆ ಬಿದ್ದು ಅನಾಹುತ ಸಂಭವಿಸುತ್ತದೆ. ಅದನ್ನೆಲ್ಲಾ ಸರಿಮಾಡುವವರೆಗೆ ಆ ಪ್ರದೇಶದ ಗ್ರಾಹಕರಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ. ಇದು ನೈಸರ್ಗಿಕ ವಿಕೋಪವಾದರೂ ಸಕಾಲದಲ್ಲಿ ಸರಿಪಡಿಸಿ ವಿದ್ಯುತ್ ಪೂರೈಕೆ ಸುಗಮಗೊಳಿಸುವ ಜವಾಬ್ದಾರಿ ನಮ್ಮದು ಎಂಬುದು ತಮಗೆಲ್ಲಾ ತಿಳಿದಿದೆ.

ಇಂಥ ಸಂದರ್ಭದಲ್ಲಿ ಕಾರ್ಯ ನಿರ್ವಹಿಸುವಾಗ ಸುರಕ್ಷತಾ ಕ್ರಮಗಳಿಗೆ ಆದ್ಯತೆ ನೀಡಬೇಕು. ಅದಕ್ಕೆ ಸಂಬಂಧಿಸಿದ ಕ್ರಮಗಳನ್ನು ಪಾಲನೆ ಮಾಡಬೇಕು. ಈ ನಿಟ್ಟಿನಲ್ಲಿ ಪ್ರತಿಬಾರಿ ಸಿಬ್ಬಂದಿ ವರ್ಗದವರಿಗೆ ಸೂಕ್ತ ತಿಳುವಳಿಕೆ ನೀಡಿದ್ದರೂ ಕೆಲವೊಮ್ಮೆ ಆಕಸ್ಮಿಕಗಳು ಸಂಭವಿಸುತ್ತಿರುವುದು ವಿಷಾದನೀಯ. ಎಚ್ಚರಿಕೆ ವಹಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿದರೆ ಜೀವಕ್ಕೆ ಅಪಾಯವಿಲ್ಲದಂತೆ ಕಾರ್ಯನಿರ್ವಹಣೆ ಸಾಧ್ಯವಾಗುತ್ತದೆ. ಲೈನ್‌ಮೆನ್‌ಗಳು ಜೀವಕ್ಕೆ ಅಪಾಯ ವಾಗದಂತೆ ಎಚ್ಚರ ವಹಿಸುವುದು ಅತ್ಯಗತ್ಯ.

ಈಗ ಗ್ರಾಹಕರಲ್ಲಿ ಸಾಕಷ್ಟು ಅರಿವು ಮೂಡಿದೆ. ಸಮಸ್ಯೆಗಳು ಎದುರಾದರೆ, ಅಕಾಲಿಕವಾಗಿ ವಿದ್ಯುತ್ ಸ್ಥಗಿತಗೊಂಡರೆ 'ಬೆಸ್ಕಾಂ'ಗೆ ದೂರುಗಳ ಮಹಾಪೂರವೇ ಹರಿದುಬರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಹಕರ ದೂರುಗಳನ್ನು ನಿಗದಿತ ಸಮಯದಲ್ಲಿ ನಿವಾರಿಸಿ, ವಿದ್ಯುತ್ ಸರಬರಾಜನ್ನು ಒದಗಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಅವಘಡಗಳನ್ನು ಎದುರಿಸಲು 'ಬೆಸ್ಕಾಂ'ನಲ್ಲಿ ಸಿಬ್ಬಂದಿ ಹಾಗೂ ಸಲಕರಣೆಗಳು ಸದಾ ಸಿದ್ಧವಾಗಿರುತ್ತವೆ. ಅವುಗಳನ್ನು ಬಳಸಿ ಸಮಸ್ಯೆಯನ್ನು ಎದುರಿಸುವುದಕ್ಕೆ ಈಗ ಎಲ್ಲರೂ ಸಜ್ಜಾಗಬೇಕಿದೆ.

ಮಳೆಗಾಲದಲ್ಲಿ ನೀರಾವರಿ ಪಂಪ್‌ಸೆಟ್‌ಗಳ ಸಮಸ್ಯೆ ಅಷ್ಟಾಗಿ ಇರುವುದಿಲ್ಲ. ಹಾಗಾಗಿ ರೈತರ ಜಮೀನಿಗೆ ನೀರೊದಗಿಸುವುದಕ್ಕೆ ಸಂಬಂಧಿಸಿದಂತೆ ವಿದ್ಯುತ್ ಉಳಿತಾಯವಾಗುವುದರಿಂದ, ಇತರ ಗ್ರಾಹಕರ ಸಮಸ್ಯೆಗಳತ್ತ ಗಮನಹರಿಸುವುದು ಮುಖ್ಯವಾಗುತ್ತದೆ.

ಮುಂದಿನ ದಿನಗಳಲ್ಲಿ ಬರುವ ಸ್ವಾತಂತ್ರ್ಯೋತ್ಸವ ಹಾಗೂ ಗೌರಿ-ಗಣೇಶ ಹಬ್ಬದ ಶುಭಾಶಯಗಳು.

ವಂದನೆಗಳೊಂದಿಗೆ,


ಸಂಪಾದಕಿ

**ಎನ್. ಜಯಂತಿ**

ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.), ಬೆಸ್ಕಾಂ


# ತಾಂತ್ರಿಕ ನಿರ್ದೇಶಕರ ಸಂದೇಶ




**ಎಚ್. ನಾಗೇಶ್**

ತಾಂತ್ರಿಕ ನಿರ್ದೇಶಕರು


ಈ ವರ್ಷದ ಬೇಸಿಗೆಯಲ್ಲಿ ವಿದ್ಯುಚ್ಛಕ್ತಿಯ ಲಭ್ಯತೆ ಕಡಿಮೆ ಇದ್ದರೂ ಸಹ ನಮ್ಮ ಬೆಸ್ಕಾಂ ಇಂಜಿನಿಯರುಗಳು ಕಷ್ಟದ ದಿನಗಳನ್ನು ಸುಸೂತ್ರವಾಗಿ ನಿಭಾಯಿಸಿ ಈ ಒಳ್ಳೆಯ ದಿನಗಳತ್ತ ಹೆಜ್ಜೆ ಇಡುತ್ತಿದ್ದೇವೆ.

ಇದೀಗ ಮುಂಗಾರು ಆರಂಭವಾಗಿರುವುದರಿಂದ ಬೇಡಿಕೆ ಪ್ರಮಾಣ ಇಳಿಮುಖವಾಗಿದ್ದು, ಉತ್ತಮ ಗುಣಮಟ್ಟದ ಹಾಗೂ ನಿರಂತರ ವಿದ್ಯುಚ್ಛಕ್ತಿ ಒದಗಿಸುವ ಸೇವೆಯನ್ನು ಗ್ರಾಹಕರಿಗೆ ನೀಡಲು ಸಾಧ್ಯವಾಗಿದೆ.

ಈಗ ನಾವು ಸದ್ಯದಲ್ಲಿ ಗಮನಹರಿಸಬೇಕಾದ ಕೆಲಸಗಳು ಈ ಕೆಳಗಿನಂತಿವೆ:

1. Work Prudence Check.
2. Bifurcation of over loaded feeders ie., more than 4 MWs
3. Providing alternate sources of supply in Bangalore City.
4. Insisting for installing DAS Compatible RMUs
5. Giving importance for customers care.
6. Following safety rules to avoid accidents.
7. Fine-tuning of feeder wise and DTC wise energy Audit.
8. Finding solutions to serious problems in billing and collections, implementation of WAMs and updating new connections due to speed and connectivity issues affecting the BESCOM revenue and customers satisfaction.

ಈಗಾಗಲೇ 2016-17ನೇ ಸಾಲಿನ ಬಜೆಟ್ ಅನ್ನು ನೀಡಲಾಗಿದ್ದು, ಅದರಂತೆ ತಾವುಗಳು ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕೆಲಸ ಮುಗಿಸಲು ಆದ್ಯತೆ ನೀಡಬೇಕಾಗಿದೆ.

ವಿತರಣಾ ನಷ್ಟವನ್ನು ಕಡಿಮೆ ಮಾಡಲು ಎಲ್ಲಾ ತರಹದ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಬೇಕಾಗಿರುತ್ತದೆ. ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬೆಸ್ಕಾಂ ಶ್ರೇಯೋಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ದುಡಿಯೋಣ ಎಂದು ಪಣತೊಟ್ಟು ರಾಷ್ಟ್ರಮಟ್ಟದಲ್ಲಿ ನಂಬರ್ ಒನ್ ಸ್ಥಾನ ಪಡೆದಿರುವ ಕಂಪನಿಯು ಅದೇ ಸ್ಥಾನ ಮುಂದುವರೆಸಿಕೊಂಡು ಹೋಗಲು ಸಹಕರಿಸುತ್ತೀರೆಂದು ನಂಬಿರುತ್ತೇನೆ.

# ಬದಲಾಗಲಿವೆ ಬೆಂಗಳೂರಿನ ಟ್ರಾನ್ಸ್‌ಫಾರ್ಮರ್‌ಗಳು

ಗ್ರಾಹಕರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡುವಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಪಾತ್ರ ತುಂಬಾ ದೊಡ್ಡದು. ಆದರೆ ಇತ್ತೀಚಿನ ದಿನಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳಿಂದಾಗಿ ಪಾದಚಾರಿಗಳಿಗೆ ವಾಹನ ಸವಾರರಿಗೆ ತೊಂದರೆಯುಂಟಾಗುತ್ತಿದೆ, ಹೀಗಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ರಸ್ತೆಯಿಂದ ಸ್ಥಳಾಂತರಿಸಬೇಕು ಎಂಬ ಆಗ್ರಹ ಕೇಳಿಬರುತ್ತಿದೆ. ಕೆಲವು ದಶಕಗಳ ಹಿಂದೆ ಟ್ರಾನ್ಸ್‌ಫಾರ್ಮರ್‌ಗಳನ್ನು ಪಾದಚಾರಿಗಳಿಗಾಗಲಿ ಅಥವಾ ವಾಹನ ಸಂಚಾರಕ್ಕಾಗಲಿ ಅಡಚಣೆಯಾಗದಂತೆ ರಸ್ತೆಯಿಂದ ಸಾಕಷ್ಟು ದೂರದಲ್ಲಿ ಸ್ಥಾಪಿಸಲಾಗಿತ್ತು. ಆದರೆ ನಗರೀಕರಣ, ತೀವ್ರವಾದ ವಾಹನ ದಟ್ಟಣೆ ಹಾಗೂ ರಸ್ತೆ ಅಗಲೀಕರಣದ ಒಟ್ಟು ಪರಿಣಾಮವಾಗಿ ರಸ್ತೆಯಿಂದ ಸಾಕಷ್ಟು ದೂರದಲ್ಲಿದ್ದ ಟ್ರಾನ್ಸ್‌ಫಾರ್ಮರ್‌ಗಳು ಈಗ ರಸ್ತೆಗಳ ಮಧ್ಯಕ್ಕೆ ಬಂದು ನಿಲ್ಲುವ ಪರಿಸ್ಥಿತಿ ಎದುರಾಗಿದೆ.




ಹಳೇ ಮಾದರಿ ಟ್ರಾನ್ಸ್‌ಫಾರ್ಮರ್. ಹೀಗಿತ್ತು

ಗ್ರಾಹಕರ ಈ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಬೆಸ್ಕಾಂ ವಿನೂತನ ಪ್ರಯೋಗ ಒಂದನ್ನು ಆರಂಭಿಸಿದೆ. ಈಗಾಗಲೇ ಬಳಕೆಯಲ್ಲಿರುವ ಟ್ರಾನ್ಸ್‌ಫಾರ್ಮರ್‌ನ್ನು ನೀವು ನೋಡಿರುತ್ತೀರಾ. ಹಳೆಯ ವಿನ್ಯಾಸಕ್ಕಿಂತ ವಿಭಿನ್ನವಾಗಿರುವ, ಅತ್ಯಂತ ಕಡಿಮೆ ಸ್ಥಳವನ್ನು ಮಾತ್ರ ಆಕ್ರಮಿಸುವ ವಿನೂತನವಾದ ಟ್ರಾನ್ಸ್‌ಫಾರ್ಮರ್ ವಿನ್ಯಾಸವೊಂದನ್ನು ಬೆಸ್ಕಾಂ ಪರಿಚಯಿಸುತ್ತಿದೆ. ಈ ಹೊಸ ಮಾದರಿಯಲ್ಲಿ ಟ್ರಾನ್ಸ್‌ಫಾರ್ಮರ್ ಸ್ಟ್ರಕ್ಚರ್‌ನ್ನು ನೆಲಮಟ್ಟದಿಂದ 10 ಅಡಿಯಷ್ಟು ಎತ್ತರಕ್ಕೆ ಸ್ಥಳಾಂತರಿಸಿ ಎಮ್.ಎಸ್ ಪೋಲ್‌ಗಳ ಮೇಲೆ ಸ್ಥಾಪಿಸಲಾಗುವುದು. ಇದರಿಂದಾಗಿ ಪಾದಚಾರಿಗಳ ಮುಕ್ತ ಓಡಾಟ ಹಾಗೂ ವಾಹನ ಸಂಚಾರಕ್ಕೆ ಯಾವುದೆ ಅಡ್ಡಿ ಆತಂಕಗಳಿರುವುದಿಲ್ಲ. ಇಷ್ಟೇ ಅಲ್ಲದೆ ಹಳೆಯ ಮಾದರಿಯ ಟ್ರಾನ್ಸ್‌ಫಾರ್ಮರ್‌ಗಳು ನೆಲಮಟ್ಟದಲ್ಲಿ 25–80 ಸ್ಕ್ವೇರ್‌ಫೀಟ್‌ನಷ್ಟು ಜಾಗ ಆಕ್ರಮಿಸಿಕೊಳ್ಳುತ್ತಿದ್ದರೆ ಈ ಹೊಸ ಡಿಸೈನ್ ಕೇವಲ ಒಂದೇ ಒಂದು ಸ್ಕ್ವೇರ್‌ಫೀಟ್ ಜಾಗದಲ್ಲಿ ಕಾರ್ಯನಿರ್ವಹಿಸಲಿದೆ. ಈ ಯೋಜನೆ ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಆರಂಭವಾಗಿದ್ದು ಸುಮಾರು 4500 ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಸ ಮಾದರಿಗೆ ಬದಲಾಯಿಸಲಾಗುವುದು.

ಬೆಸ್ಕಾಂನ ಈ ವಿನೂತನ ಪ್ರಯೋಗಕ್ಕೆ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಬೆಂಬಲ ವ್ಯಕ್ತವಾಗಿದೆ. ಬೆಂಗಳೂರಿನ ಜಯನಗರ ಹಾಗೂ ಚಿಕ್ಕಪೇಟೆ ಉಪವಿಭಾಗಗಳಲ್ಲಿ ಪ್ರಾಯೋಗಿಕವಾಗಿ ಈ ಹೊಸ ಮಾದರಿಯ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸಲಾಗಿದ್ದು, ಈ ಉಪವಿಭಾಗದ ನಿವಾಸಿಗಳು ಈ ಪ್ರಯೋಗವನ್ನು ಬೆಂಬಲಿಸಿ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ. ಇದೇ ಆಧಾರದ ಮೇಲೆ ಬೆಸ್ಕಾಂ ಈಗ ಬೆಂಗಳೂರು ನಗರದಾದ್ಯಂತ ಸರ್ವೆ ನಡೆಸಿ, ರಸ್ತೆ ಹಾಗೂ ಪಾದಚಾರಿ ಮಾರ್ಗಗಳನ್ನು ಆಕ್ರಮಿಸಿಕೊಂಡಿರುವ 4500 ಟ್ರಾನ್ಸ್‌ಫಾರ್ಮರ್‌ಗಳನ್ನು ಗುರುತಿಸಿದೆ. ಅತಿ ಶೀಘ್ರದಲ್ಲೆ ಈ 4500 ಟ್ರಾನ್ಸ್‌ಫಾರ್ಮರ್‌ಗಳನ್ನು ಹೊಸ ಮಾದರಿಗೆ ಬದಲಾಯಿಸಿ ಸದರಿ ರಸ್ತೆಗಳನ್ನು ಪಾದಚಾರಿ ಸ್ನೇಹಿ ರಸ್ತೆಗಳನ್ನಾಗಿ ಮಾರ್ಪಾಡು ಮಾಡಲಾಗುವುದು.


ಹೀಗಾಯ್ತು ಹೊಸ ಟ್ರಾನ್ಸ್‌ಫಾರ್ಮರ್.

ಈ ಹೊಸ ಮಾದರಿ ಟ್ರಾನ್ಸ್‌ಫಾರ್ಮರ್ ಸ್ಥಾಪನೆ ಹೇಗೆ ಎಂಬ ಕುತೂಹಲ ನಿಮಗಿದೆಯೇ? ಈ ಕುತೂಹಲಕ್ಕೆ ಉತ್ತರ ಇಲ್ಲಿದೆ. ಮೊದಲು 90*90*90 ಅಳತೆಯ ಹಳ್ಳ ತೋಡಿ ಕಾಂಕ್ರೀಟ್ ಬೆಡ್ ಹಾಕಲಾಗುತ್ತದೆ. ಇದರ ಮೇಲೆ ಈಗಾಗಲೇ ಸಿದ್ಧಗೊಳಿಸಲಾಗಿರುವ ಕಾಂಕ್ರೀಟ್ ಪೆಡೆಸ್ಟಲ್ ಅನ್ನು ಇಡಲಾಗುತ್ತದೆ. ನಂತರ 165 ಮಿಮೀ ಸುತ್ತಳತೆಯ ಕಂಬವನ್ನು ಬೇಸ್‌ಪ್ಲೇಟ್ ಮತ್ತು ಬೋಲ್ಟ್‌ಗಳ ಸಹಾಯದಿಂದ ಕಾಂಕ್ರೀಟ್ ಪೀಠದ ಮೇಲೆ ನಿಲ್ಲಿಸಲಾಗುತ್ತದೆ. ನಂತರ ಟ್ರಾನ್ಸ್‌ಫಾರ್ಮರ್‌ಅನ್ನು ಈ ಸಿಂಗಲ್ ಪೋಲ್‌ನ ಮೇಲೆ ನೆಲದಿಂದ ಅಂದಾಜು 10 ಅಡಿ ಎತ್ತರದಲ್ಲಿ ಸ್ಥಾಪಿಸಲಾಗಿರುವ ಪ್ಲ್ಯಾಟ್‌ಫಾರಂ ಮೇಲೆ ಅಳವಡಿಸಲಾಗುತ್ತದೆ.



ಈ ಸಿಂಗಲ್‌ಪೋಲ್ ಟ್ರಾನ್ಸ್‌ಫಾರ್ಮರ್ ಭಾರವನ್ನು ಹೊರಲು ಆಸರೆಯಾಗುವಂತೆ ಹತ್ತಿರದಲ್ಲಿ ಸ್ಪನ್ ಪೈಪೊಂದಕ್ಕೆ ಸಾಕಷ್ಟು ಕ್ಲ್ಯಾಂಪ್‌ಗಳನ್ನು ಅಳವಡಿಸಿ ನೆಡಲಾಗುತ್ತದೆ. ಕಡಿಮೆ ಜಾಗವನ್ನು ಆಕ್ರಮಿಸುವುದರ ಜೊತೆಗೆ ಈ ಹೊಸ ಟ್ರಾನ್ಸ್‌ಫಾರ್ಮರ್ ಅನ್ನು ವಿದ್ಯುತ್ ಸುರಕ್ಷತೆ, ಸ್ಥಿರತೆ ಹಾಗೂ ಇನ್ಸೂಲೇಷನ್ ವಿಷಯದಲ್ಲೂ ಪರೀಕ್ಷಿಸಲಾಗಿದೆ.

ಹೊಸ ಟ್ರಾನ್ಸ್‌ಫಾರ್ಮರ್ ಪ್ರಾಯೋಗಿಕ ಯೋಜನೆ ಯಶಸ್ವಿಯಾದ ಹಿನ್ನೆಲೆಯಲ್ಲಿ ಸದ್ಯದಲ್ಲೇ ಟೆಂಡರ್ ಪ್ರಕ್ರಿಯೆಯ ಮೂಲಕ ಬೆಂಗಳೂರಿನ 4500 ಹಳೆ ಮಾದರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಾಯಿಸಲು ಬೆಸ್ಕಾಂ ಸಜ್ಜಾಗಿದೆ.

## ಡಾ. ಆರ್.ಸಿ. ಚೇತನ್, ನೂತನ ನಿರ್ದೇಶಕರು (ಹಣಕಾಸು)



ಡಾ॥ ಆರ್.ಸಿ. ಚೇತನ್

ಡಾ॥ ಆರ್.ಸಿ. ಚೇತನ್, ಭಾ.ರಾ.ಸೇ. ರವರು ಮೈಸೂರಿನ ಜೆ.ಎಸ್.ಎಸ್ ಕಾಲೇಜಿನಿಂದ MBBS ಪದವಿಯನ್ನು ಪಡೆದಿದ್ದು, 2006ರಲ್ಲಿ ಭಾರತೀಯ ರಾಜಸ್ವ ಸೇವೆಗೆ ಆಯ್ಕೆಯಾಗಿರುತ್ತಾರೆ. ಮೊದಲಿಗೆ 2008ರಲ್ಲಿ ಮುಂಬೈ ಅಬಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. 2011 ರಿಂದ 2013ರವರೆಗೆ ಸೇವಾ ತೆರಿಗೆ (ಲೆಕ್ಕ ಪರಿಶೋಧನೆ) ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ಜೆ.ಎನ್.ಸಿ.ಎಚ್ ಮುಂಬೈ ವಲಯ–IIರ ಇಂಪೋರ್ಟ್ ಆಫ್ ಮೆಟಲ್ ಅಂಡ್ ಸ್ಕ್ರಾಪ್ ಇಲಾಖೆಯಲ್ಲಿ ಪ್ರಭಾರ ಉಪ ಆಯುಕ್ತರಾಗಿ ಸೇವೆ ಸಲ್ಲಿಸಿದ್ದು, ತದನಂತರ ಏಪ್ರಿಲ್ 2016 ರಲ್ಲಿ ಜಂಟಿ ಆಯುಕ್ತರಾಗಿ ಪದೋನ್ನತಿ ಹೊಂದಿರುತ್ತಾರೆ.

ಪ್ರಸ್ತುತ ಇವರು ಬೆವಿಕಂ ನ ನೂತನ ನಿರ್ದೇಶಕರು (ಹಣಕಾಸು), ಹುದ್ದೆಗೆ ನಿಯೋಜನೆಗೊಂಡಿದ್ದು, ಇವರಿಗೆ ಬೆಸ್ಕಾಂನ ಅಧಿಕಾರಿ/ನೌಕರರು ಹಾಗೂ ಬೆಸ್ಕಾಂ ಸ್ನೇಹಿ ಸಂಪಾದಕೀಯ ಮಂಡಳಿ ವತಿಯಿಂದ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರುತ್ತೇವೆ.




**BESCOM won two awards from MNRE, GOI. One for PROMOTION/ FACILITATION and another for SELF INSTALLATION OF SOLAR**



# ಸರ್ಕಾರೇತರ ಸಂಸ್ಥೆಗಳಿಂದ ವಿದ್ಯುತ್ ಜಾಗೃತಿ ಅಭಿಯಾನ

ರಾಜ್ಯದಲ್ಲಿ 2011 ರಿಂದ ಇಲ್ಲಿಯವರಗೆ ಪ್ರತಿ ವರ್ಷ ವಿದ್ಯುತ್ ಅವಘಡಗಳ ಸಂಖ್ಯೆ ಹೆಚ್ಚುತ್ತಲೇ ಇರುವುದು ಅತ್ಯಂತ ಕಳವಳದ ಸಂಗತಿ. ವಿದ್ಯುತ್ ಅವಘಡಗಳನ್ನು ನಿಯಂತ್ರಿಸುವ ಪ್ರಯತ್ನವಾಗಿ ಬೆಸ್ಕಾಂ ಹಲವು ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಆಯೋಜಿಸುತ್ತಲೇ ಇದೆ. ಪ್ರತಿ ವಾರ ಉಪವಿಭಾಗಗಳಲ್ಲಿ ನಡೆಸುವ ಗ್ರಾಹಕ ಸಂವಾದ ಸಭೆಗಳಲ್ಲಿ, ವಿಭಾಗ, ಉಪವಿಭಾಗಗಳ ಮಟ್ಟದಲ್ಲಿ ವಿದ್ಯುತ್ ಸುರಕ್ಷತೆಯ ಬಗ್ಗೆ ಗ್ರಾಹಕರಿಗೆ ಸಾಕಷ್ಟು ತಿಳುವಳಿಕೆ ನೀಡಲಾಗುತ್ತಿದೆ. ಗ್ರಾಹಕರಿಗಷ್ಟೇ ಅಲ್ಲದೇ ಲೈನ್‌ಮೆನ್‌ಗಳಿಗೂ ವಿದ್ಯುತ್ ಸುರಕ್ಷತೆ ಸಂಬಂಧಿತ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಲೈನ್‌ಮೆನ್‌ಗಳು ವಿದ್ಯುತ್ ಮಾರ್ಗಗಳ ದುರಸ್ಥಿ ಕಾರ್ಯದಲ್ಲಿದ್ದಾಗ ಸುರಕ್ಷತಾ ಉಪಕರಣಗಳನ್ನು ಕಡ್ಡಾಯವಾಗಿ ಬಳಸುವಂತೆ ನಿರಂತರವಾಗಿ ಆಗ್ಗಿಂದಾಗ್ಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಹಾಗೂ ಕಾಲ ಕಾಲಕ್ಕೆ ಅನೇಕ ಕಾರ್ಯಾಗಾರಗಳನ್ನೂ ಹಮ್ಮಿಕೊಳ್ಳಲಾಗುತ್ತಿದೆ. ಹೀಗಿದ್ದಾಗಲೂ ವಿದ್ಯುತ್ ಅವಘಡಗಳು ಘಟಿಸುತ್ತಲೆ ಇರುವುದು ವಿಷಾದನೀಯ.

ವಿದ್ಯುತ್ ಅಪಘಾತಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ವಿದ್ಯುತ್ ಸುರಕ್ಷತೆ ಕುರಿತು ಗ್ರಾಹಕರಲ್ಲಿ ಅರಿವು ಮೂಡಿಸಲು ಬೆಸ್ಕಾಂ ವಿನೂತನ ಪ್ರಯೋಗವನ್ನು ಕೈಗೊಂಡಿದೆ. ಸರ್ಕಾರೇತರ ಸಂಸ್ಥೆಗಳ ನೆರವಿನೊಂದಿಗೆ ಬೆಸ್ಕಾಂ ವ್ಯಾಪ್ತಿಯ ಹೋಬಳಿ ಮಟ್ಟದಲ್ಲಿ ನಿರಂತರವಾಗಿ ಕಾರ್ಯಾಗಾರ, ಬೀದಿ ನಾಟಕಗಳನ್ನು ಆಯೋಜಿಸಲಾಗಿರುತ್ತದೆ. ಇದು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಪಂಕಜ್ ಕುಮಾರ್ ಪಾಂಡೆಯವರೇ ನಿರೂಪಿಸಿದ ಮಹತ್ವದ ಕಾರ್ಯಯೋಜನೆಯಾಗಿದೆ.



ಈ ಯೋಜನೆ ಯಶಸ್ವಿಯಾಗಲಿ ಎಂಬ ಉದ್ದೇಶದಿಂದ ಸರ್ಕಾರೇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯಕ್ರಮಗಳನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ. ಸುರಕ್ಷತೆಯ ಕುರಿತಾದ ಸಂದೇಶ ಹೆಚ್ಚಿನ ಗ್ರಾಹಕರಿಗೆ ತಲುಪುವ ಉದ್ದೇಶದಿಂದ, ಆಯೋಜಿಸಲಾಗುವ ಪ್ರತಿ ಕಾರ್ಯಾಗಾರದಲ್ಲಿ ಕನಿಷ್ಠ 100 ರಿಂದ 120 ಮಂದಿ ಗ್ರಾಹಕರು/ಸಾರ್ವಜನಿಕರು ಉಪಸ್ಥಿತರಿರುವುದು ಕಡ್ಡಾಯವಾಗಿರುತ್ತದೆ. ಅಲ್ಲದೆ ಈ ಜಾಗೃತಿ ಅಭಿಯಾನದಲ್ಲಿ ಸ್ಥಳೀಯ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಸ್ತ್ರೀಶಕ್ತಿ ಸಂಘದ ಸದಸ್ಯರು ಸೇರಿದಂತೆ ಬೆಸ್ಕಾಂನ ಸ್ಥಳೀಯ ಅಧಿಕಾರಿಗಳು/ಸಿಬ್ಬಂದಿಗಳು ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು ಸರ್ಕಾರೇತರ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

ಕೇವಲ ಕಾರ್ಯಾಗಾರಗಳನ್ನು ಮಾತ್ರವೇ ಆಯೋಜಿಸದೆ, ಹೆಚ್ಚಿನ ಗ್ರಾಹಕರು/ಸಾರ್ವಜನಿಕರನ್ನು ತಲುಪುವ ಉದ್ದೇಶದಿಂದ ಗ್ರಾಮ/ಹೋಬಳಿಗಳಲ್ಲಿ ಸಂತೆ, ಜಾತ್ರೆಗಳಂತಹ ಹೆಚ್ಚಿನ ಜನ ಸೇರುವ ಜಾಗಗಳಲ್ಲಿ ಬೀದಿ ನಾಟಕಗಳನ್ನು ಆಯೋಜಿಸಲಾಗುತ್ತಿದೆ. ಈ ಬೀದಿ ನಾಟಕಗಳಲ್ಲಿ ವಿದ್ಯುತ್ ಅಪಘಾತ, ವಿದ್ಯುತ್ ಉಳಿತಾಯ, ವಿದ್ಯುತ್ ಕಳ್ಳತನ, ಬೆಸ್ಕಾಂ ತನ್ನ ಗ್ರಾಹಕರಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳು, ಎಲ್.ಇ.ಡಿ ಬಲ್ಬ್



ಹಾಗೂ ಸೋಲಾರ್ ಉಪಕರಣಗಳ ಬಳಕೆ, ಹೀಗೆ ಅನೇಕ ವಿಷಯಗಳ ಕುರಿತು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಿಳುವಳಿಕೆ ನೀಡುವ ಪ್ರಯತ್ನ ಮಾಡಲಾಗುತ್ತಿದೆ. ಈ ಕಾರ್ಯಯೋಜನೆಗಾಗಿ ಆಯ್ಕೆಗೊಂಡಿರುವ ನಾಲ್ಕು ಸರ್ಕಾರೇತರ ಸಂಸ್ಥೆಗಳು ಸತತ ಒಂದು ವರ್ಷಗಳ ಕಾಲ ಈ ರೀತಿ ವಿನೂತನ ಕಾರ್ಯಕ್ರಮಗಳನ್ನು ಬೆಸ್ಕಾಂ ವ್ಯಾಪ್ತಿಯ ಒಟ್ಟು 201 ಹೋಬಳಿಗಳಲ್ಲಿ ಕೈಗೊಳ್ಳಲಾಗಿದೆ.

ನಿಮ್ಮ ವಿಭಾಗ–ಉಪವಿಭಾಗಗಳಲ್ಲಿ ಈ ಸರ್ಕಾರೇತರ ಸಂಸ್ಥೆಗಳು ಈಗಾಗಲೇ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದಲ್ಲಿ ತಾವೂ ಪಾಲ್ಗೊಂಡು, ಅವಶ್ಯಕ ಬೆಂಬಲ ನೀಡಿ, ಈ ವಿನೂತನ ಯೋಜನೆಯನ್ನು ಯಶ್ವಸಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇವೆ.

ವಿದ್ಯುತ್ ಸುರಕ್ಷತೆ ಕುರಿತ ಕಾರ್ಯಕ್ರಮಗಳು ಗ್ರಾಹಕರು/ಸಾರ್ವಜನಿಕರಿಗೆ ಮಾತ್ರ ಸೀಮಿತವಾಗಿರದೇ, ನಮ್ಮ ಲೈನ್‌ಮೆನ್‌ಗಳೂ ಸುರಕ್ಷತಾ ನಿಯಮಗಳನ್ನು ತಪ್ಪದೇ ಪಾಲಿಸಬೇಕು. ಸೇಫ್ಟಿಬೆಲ್ಟ್, ಸೇಫ್ಟಿ ಗ್ಲೌಸ್, ಸೇಫ್ಟಿ ಹೆಲ್ಮೆಟ್‌ಗಳಂತಹ ಸುರಕ್ಷತಾ ಉಪಕರಣಗಳನ್ನು ಕಡ್ಡಾಯವಾಗಿ ಬಳಸಬೇಕು. ವಿದ್ಯುತ್ ಮಾರ್ಗಗಳ ದುರಸ್ತಿ ಸಂದರ್ಭಗಳಲ್ಲಿ ತಪ್ಪದೇ ಅರ್ಥಿಂಗ್ ರಾಡ್‌ಗಳನ್ನು ಬಳಸಿ ಸುರಕ್ಷಾ ವಲಯ ನಿರ್ಮಾಣವಾದ ನಂತರವಷ್ಟೇ ವಿದ್ಯುತ್ ಮಾರ್ಗದಲ್ಲಿ ಕೆಲಸ ಮಾಡಬೇಕು. ಎಲ್ಲಾ ಕಾರ್ಯ ಮತ್ತು ಪಾಲನಾ ಘಟಕಗಳ ಶಾಖಾಧಿಕಾರಿಗಳು ಆಗಾಗ್ಗೆ, ಲೈನ್‌ಮೆನ್‌ಗಳ ಸಭೆ ಕರೆದು ಅವರಿಗೆ ವಿದ್ಯುತ್ ಸುರಕ್ಷತೆಯ ಮಹತ್ವದ ಕುರಿತು ಮನವರಿಕೆ ಮಾಡಿಸಬೇಕು. ಕಾರ್ಯ ಕ್ಷೇತ್ರದಲ್ಲಿ ಲೈನ್‌ಮನ್‌ಗಳು ಅನುಸರಿಸಬೇಕಾದ ಸುರಕ್ಷತಾ ಕ್ರಮದ ಬಗ್ಗೆ ತಿಳಿಹೇಳಬೇಕು. ಅಲ್ಲದೆ, ವಿದ್ಯುತ್ ಮಾರ್ಗಗಳ ಮತ್ತು ವಿದ್ಯುತ್ ಪರಿವರ್ತಕದ ದುರಸ್ತಿ ವೇಳೆ ಲೈನ್‌ಮೆನ್‌ಗಳು ಸುರಕ್ಷತಾ ಉಪಕರಣಗಳನ್ನು ಸರಿಯಾಗಿ ಬಳಸುತ್ತಿರುವುದರ ಕುರಿತು ಖುದ್ದು ಖಾತ್ರಿ ಮಾಡಿಕೊಳ್ಳಬೇಕು.

ನಮ್ಮ ಪ್ರತಿಯೊಬ್ಬ ಲೈನ್‌ಮೆನ್ ನೌಕರ ಸಿಬ್ಬಂದಿಯ ಜೀವವು ಬೆಸ್ಕಾಂಗಷ್ಟೇ ಅಲ್ಲದೇ ಅವರವರ ಕುಟುಂಬಕ್ಕೂ ಅತ್ಯಮೂಲ್ಯವಾಗಿರುತ್ತದೆ. ಹೀಗಿರುವಾಗ ತಾವು ಸ್ವಲ್ಪವೂ ನಿರ್ಲಕ್ಷ ವಹಿಸದೇ, ಜವಾಬ್ದಾರಿಯುತವಾಗಿ ಎಲ್ಲಾ ಸುರಕ್ಷತಾ ನಿಯಮಗಳನ್ನು ಪಾಲಿಸಿ, ಕಾರ್ಯನಿರ್ವಹಿಸಬೇಕು.



# ವಿದ್ಯುತ್ ಸರಬರಾಜಿಗೆ ವಿತರಣ ಲೈಸೆನ್ಸ್‌ದಾರರ ಷರತ್ತುಗಳು

*ಮುಂದುವರಿದ ಭಾಗ...*

**(ಬಿ) i)** ವಾಸ್ತವಿಕ ವೈರಿಂಗ್ ನಕ್ಷೆ ಹಾಗೂ ವಿದ್ಯುತ್ ಗುತ್ತಿಗೆದಾರರ ಕಾರ್ಯಸಮಾಪನಾ ವರದಿಯನ್ನು ಸ್ವೀಕರಿಸಿದ ಮತ್ತು ವಿದ್ಯುತ್ ಸಂಪರ್ಕ ಸೇವಾ ಮಾರ್ಗದ ಕೆಲಸವು ಪೂರ್ಣಗೊಂಡಿದೆ ಎಂದು ಅರ್ಜಿದಾರರಿಂದ ಮಾಹಿತಿ ಪಡೆದ ನಂತರ, ಲೈಸೆನ್ಸುದಾರರ ಇಂಜಿನಿಯರ್ ಅವರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷೆಯನ್ನು ಯಾವ ದಿನಾಂಕದಂದು ಯಾವ ಸಮಯಕ್ಕೆ ನಡೆಸುವರು ಎಂಬುದರ ಬಗ್ಗೆ ಲೈಸೆನ್ಸುದಾರರು ಆ ಅರ್ಜಿದಾರರಿಗೆ ತಿಳಿಸತಕ್ಕದ್ದು. ಆ ರೀತಿ ತಪಾಸಣೆ ಮತ್ತು ಪರೀಕ್ಷೆ ನಡೆಸುವ ಸಮಯದಲ್ಲಿ ಲೈಸೆನ್ಸುದಾರರ ಇಂಜಿನಿಯರ್ ಅವರಿಗೆ ಅವಶ್ಯ ಮಾಹಿತಿ ನೀಡಲು ಅರ್ಜಿದಾರರ ವಿದ್ಯುತ್ ಗುತ್ತಿಗೆದಾರರಿಂದ ನೇಮಿಸಲ್ಪಟ್ಟ ಮೇಲ್ವಿಚಾರಕರು ಹಾಜರಿರುವಂತೆ ಖಚಿತಪಡಿಸಿಕೊಳ್ಳುವುದು ಅರ್ಜಿದಾರರ ಕರ್ತವ್ಯವಾಗಿರುತ್ತದೆ. ಅರ್ಜಿದಾರರು ಈ ಕ್ರಮವನ್ನು ಅನುಸರಿಸಿದ ನಂತರ, ಇಂಜಿನಿಯರ್‌ರವರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷಾ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು.

ಲೈಸೆನ್ಸುದಾರರು ಸ್ಥಾಪನದ ತಪಾಸಣೆ ಮತ್ತು ಪರೀಕ್ಷೆಯನ್ನು ಪೂರ್ಣಗೊಳಿಸಿ, ತೃಪ್ತರಾಗದ ಹೊರತು, ಅರ್ಜಿದಾರರ ಸ್ಥಾಪನಕ್ಕೆ ಯಾವುದೇ ರೀತಿಯ ವಿದ್ಯುತ್ ಸಂಪರ್ಕವನ್ನು ನೀಡಬಾರದು. ಇಂಜಿನಿಯರ್‌ರವರು ನಡೆಸುವ ಮೊದಲ ತಪಾಸಣೆ ಮತ್ತು ಪರೀಕ್ಷೆಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸತಕ್ಕದ್ದಲ್ಲ. ಆದರೆ, ಮೊದಲ ತಪಾಸಣೆಯನ್ನು ನಡೆಸುವುದಕ್ಕಾಗಿ ನಿಗದಿಪಡಿಸಿದ ದಿನಾಂಕದಂದು, ನಿಗದಿತ ಸಮಯಕ್ಕೆ ಮೇಲೆ ತಿಳಿಸಿರುವಂತೆ ಅರ್ಜಿದಾರ ಅಥವಾ ಆತನ ಪ್ರತಿನಿಧಿ ಅಥವಾ ಆತನ ವಿದ್ಯುತ್ ಗುತ್ತಿಗೆದಾರರು ಹಾಜರಾಗದಿದ್ದ ಕಾರಣ ಅಥವಾ ಸ್ಥಾಪನದ ಮೊದಲ ತಪಾಸಣೆ/ಪರೀಕ್ಷೆಯ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳ ಪ್ರಯುಕ್ತ ಅಥವಾ ಸ್ಥಾಪನದ ಕೆಲಸ ಪೂರ್ಣವಾಗಿಲ್ಲದ ಕಾರಣದಿಂದ ಮೊದಲ ತಪಾಸಣೆ ಅಥವಾ ಪರೀಕ್ಷೆಯನ್ನು ನಡೆಸಲು ಸೂಕ್ತ ಸೌಲಭ್ಯವನ್ನು ಒದಗಿಸದ ಕಾರಣ ಪುನಃ ತಪಾಸಣೆ/ಪರೀಕ್ಷೆ ನಡೆಸಬೇಕಾಗಿ ಬಂದರೆ, ಅಂತಹ ಪ್ರತಿಯೊಂದು ತಪಾಸಣೆ/ ಪರೀಕ್ಷೆಗೆ ಕಲಮು 30.12ರಲ್ಲಿ ನಿಗದಿಪಡಿಸಿರುವ ಶುಲ್ಕವನ್ನು ಅರ್ಜಿದಾರರು ಪಾವತಿಸಬೇಕಾಗುತ್ತದೆ.

**ಟಿಪ್ಪಣಿ:** ಆ ವಿದ್ಯುತ್ ಗುತ್ತಿಗೆದಾರರ ಮೇಲ್ವಿಚಾರಕರು ತಪಾಸಣೆಯ ಸಮಯದಲ್ಲಿ ಹಾಜರಿರದಿದ್ದರೆ, ಲೈಸೆನ್ಸುದಾರರು ಸ್ಥಾಪನದ ತಪಾಸಣೆ ಮತ್ತು ವಿದ್ಯುತ್ ಸಂಪರ್ಕ ನೀಡುವ ಮತ್ತೊಂದು ದಿನಾಂಕವನ್ನು ಅರ್ಜಿದಾರರಿಗೆ ತಿಳಿಸತಕ್ಕದ್ದು. ಒಂದು ವೇಳೆ ಆ ಮೇಲ್ವಿಚಾರಕರು ಎರಡನೆಯ ತಪಾಸಣೆಯ ಸಂದರ್ಭದಲ್ಲಿ ಹಾಜರಿರದಿದ್ದರೂ, ಪರೀಕ್ಷೆಯನ್ನು ನಡೆಸಿ, ಅದರ ಫಲಿತಾಂಶವು ತೃಪ್ತಿಕರವಾಗಿದ್ದರೆ, ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆಯನ್ನು ನೀಡತಕ್ಕದ್ದು. ಈ ರೀತಿ ನಡೆಸಿದ ಎರಡನೆಯ ಅಥವಾ ತದನಂತರದ ತಪಾಸಣೆಗೆ ಕಲಮು 30.12ರ ಪ್ರಕಾರ ಗ್ರಾಹಕರು ಶುಲ್ಕವನ್ನು ಪಾವತಿಸತಕ್ಕದ್ದು.

ಸ್ಥಾಪನದ ವಿದ್ಯುತ್ ನಿರೋಧಕ (ಇನ್ಸುಲೇಷನ್) ಪರೀಕ್ಷೆಯನ್ನು ನಡೆಸುವುದಕ್ಕೆ ಮುಂಚೆ, ವಿದ್ಯುತ್ ಸಂಪರ್ಕ ಸೇವಾ ಮಾರ್ಗವನ್ನೊಳಗೊಂಡಂತೆ, ವೈರಿಂಗ್ ಕೆಲಸವು ಎಲ್ಲ ರೀತಿಯಲ್ಲಿ ಪೂರ್ಣಗೊಂಡಿರತಕ್ಕದ್ದು. ಪರೀಕ್ಷೆಯನ್ನು ನಡೆಸುವ ಮುನ್ನ ಸ್ಥಾಪನದಲ್ಲಿರುವ ಎಲ್ಲ ವಿದ್ಯುತ್ ಸಂಪರ್ಕಿತ ಜೋಡಣೆಗಳು, ಅಂದರೆ ಇನ್‌ಕ್ಯಾಂಡಿಸೆಂಟ್ ಲ್ಯಾಂಪುಗಳು, ಫ್ಯಾನುಗಳು, ಮೋಟಾರುಗಳು, ತಾಪನ, ಅಡಿಗೆ ಸಲಕರಣೆ ಇನ್ನಿತರ ಸಲಕರಣೆಗಳನ್ನು ವಿದ್ಯುತ್ ವಾಹಕಕ್ಕೆ(ಕಂಡಕ್ಟರ್) ಸಂಪರ್ಕಗೊಳಿಸಿ, ಎಲ್ಲ ಫ್ಯೂಸುಗಳನ್ನು ಸುಸ್ಥಿತಿಯಲ್ಲಿರಿಸಿ ಸ್ವಿಚ್ ಆನ್‌ನಲ್ಲಿರಬೇಕು. ಯಾವುದೇ ವಿದ್ಯುತ್ ಸಂಬಂಧಿತ ಕೆಲಸವಾಗಲೀ ಅಪೂರ್ಣಗೊಂಡಿರಬಾರದು ಹಾಗೂ ತಾತ್ಕಾಲಿಕ ಮಾರ್ಗ ಅಥವಾ ತಾತ್ಕಾಲಿಕ ಜೋಡಣೆ ಅಥವಾ ಮಾರ್ಗದ ಅಂತ್ಯವು ಸ್ಥಾಪನದಲ್ಲಿ ಸೇರಿರಬಾರದು.

*....ಮುಂದುವರಿಯುವುದು*

## ಮರೆಯಾಗುತ್ತಿರುವ ಆಟಗಳು – ಲಗೋರಿ

ಈ ಆಟವನ್ನು ಗಂಡು ಅಥವಾ ಹೆಣ್ಣು ಎಂಬ ಭೇದವಿಲ್ಲದೆ ಎರಡು ಗುಂಪುಗಳಲ್ಲಿ ಆಡುವ ಆಟವಾಗಿದೆ. ಇದು ಆಟದ ಮೈದಾನದಲ್ಲಿ ಆಡಬಹುದಾಗಿದ್ದು ಮನೆಯ ಒಳಗಡೆ ಆಡುವ ಆಟವಲ್ಲ, ಆದರೂ, ಮನೆಯ ಆವರಣ ದೊಡ್ಡದಾಗಿದ್ದರೆ, ಆವರಣದಲ್ಲಿ ಆಡಬಹುದಾಗಿದೆ.



ಚೆಂಡು ಮತ್ತು ಚಪ್ಪಟೆ ಕಲ್ಲುಗಳು ಈ ಆಟಕ್ಕೆ ಬೇಕಾದ ವಸ್ತುಗಳು. ಒಂದು ರೀತಿಯಲ್ಲಿ ಕ್ರಿಕೆಟ್ ಆಟದಂತೆ ಇದೂ ಒಂದು ಆಟ. ಚಪ್ಪಟೆ ಕಲ್ಲುಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ಸ್ವಲ್ಪ ದೂರದಿಂದ ಒಬ್ಬ ಚೆಂಡಿನಿಂದ ಗುರಿ ಇಟ್ಟು ಕಲ್ಲುಗಳಿಗೆ ಹೊಡೆಯುತ್ತಾನೆ. ಹಾಗೆ ಎಸೆದ ಚೆಂಡು ಕಲ್ಲಿಗೆ ಬೀಳದಿದ್ದರೆ, ಮತ್ತೊಂದು ಬದಿಯಲ್ಲಿ ನಿಂತಿರುವ ಕ್ಷೇತ್ರ ರಕ್ಷಣೆ ತಂಡದ ಆಟಗಾರನು ಅದನ್ನು ಹಿಡಿಯುತ್ತಾನೆ. ಗುರಿ ತಪ್ಪಿದರೆ ಮತ್ತೊಂದು ಎಸೆತ. ಹೀಗೆ ಮೂರು ಎಸೆತಗಳು ಆದರೆ ಅವರ ಸರದಿ ಮುಗಿಯಿತು ಎಂದರ್ಥ.

ಎಸೆದ ಚೆಂಡು ಕಲ್ಲುಗಳಿಗೆ ಬಿದ್ದು, ಕಲ್ಲುಗಳು ನೆಲಕ್ಕೆ ಉರುಳಿದಾಗ, ಕ್ಷೇತ್ರ ರಕ್ಷಣೆ ತಂಡದ ಆಟಗಾರರು ಚೆಂಡನ್ನು ಹಿಡಿದು, ಎದಿರು ತಂಡದ ಯಾವುದಾದರೂ ಒಬ್ಬ ಆಟಗಾರನಿಗೆ ತಗಲುವಂತೆ ಚೆಂಡನ್ನು ಗುರಿ ಇಟ್ಟು ಎಸೆಯಬೇಕು. ಆಟಗಾರನಿಗೆ ತಗಲುವ ಒಳಗೆ ಬಿದ್ದ ಕಲ್ಲುಗಳನ್ನು ಸ್ವಸ್ಥಾನದಲ್ಲಿ ಜೋಡಿಸಿದರೆ, ಆ ತಂಡ ಒಂದು ಅಂಕ ಪಡೆದಂತೆ. ಪುನಃ ಆಟ ಮುಂದುವರೆಯುತ್ತದೆ. ಒಂದು ವೇಳೆ ಕಲ್ಲನ್ನು ಜೋಡಿಸುವ ಒಳಗೆ ಚೆಂಡು ಆಟಗಾರನಿಗೆ ತಗಲಿದರೆ, ಆ ತಂಡ ಔಟ್ ಎಂದರ್ಥ. ಕ್ಷೇತ್ರ ರಕ್ಷಣೆ ತಂಡಕ್ಕೆ ಒಂದು ಅಂಕ ಲಭ್ಯವಾಗುತ್ತದೆ. ಕ್ಷೇತ್ರ ರಕ್ಷಣೆ ಮಾಡಿದ ತಂಡದ ಸರದಿ ಈಗ ಕಲ್ಲಿಗೆ ಗುರಿ ಇಟ್ಟು ಹೊಡೆಯುವ ಅವಕಾಶವಾಗುತ್ತದೆ. ಕನಿಷ್ಠ 4 ಜನರ ತಂಡವಿದ್ದರೆ ಆಟ ಆಡಲು ಆಸಕ್ತಿ ಇರುತ್ತದೆ. ಗುರಿ ಹಾಗೂ ಚಾಕಚಕ್ಯತೆ ಈ ಆಟಕ್ಕೆ ಮುಖ್ಯವಾದ ಅಂಶಗಳು.

# ಪ್ರತಿಭಾವಂತ ವಿದ್ಯಾರ್ಥಿ ಸುದರ್ಶನ್ ಸಾಧನೆ



**■ ನೀವು ನಿಮ್ಮ ಪರಿಚಯ ಮಾಡಿಕೊಳ್ಳಿ.**

ನನ್ನ ಹೆಸರು ಸುದರ್ಶನ. ಓದಿದ ಶಾಲೆ ಚಿನ್ಮಯ ವಿದ್ಯಾಲಯ, ಕೋರಮಂಗಲ. 2015–16ರ ಸಾಲಿನ 10ನೇ ತರಗತಿ (ಐಸಿಎಸ್‌ಇ) ಪರೀಕ್ಷೆಯಲ್ಲಿ ದೇಶಕ್ಕೆ 2ನೇ ರ್‍ಯಾಂಕ್ ಪಡೆದು ತೇರ್ಗಡೆ ಹೊಂದಿದ್ದೇನೆ.

**■ ನಿಮ್ಮ ವಿದ್ಯಾಭ್ಯಾಸದ ಗುಟ್ಟೇನು?**

1) ವಿದ್ಯಾಲಯದಲ್ಲಿ ಏಕಾಗ್ರಚಿತ್ತವಾಗಿ ಶಿಕ್ಷಕರು ಬೋಧಿಸಿದ ಪಾಠಗಳನ್ನು ಶ್ರವಣ ಮಾಡುವುದು.
2) ಮನೆಗೆ ಬಂದು ನಿತ್ಯ 3 ಘಂಟೆಗಳ ಕಾಲ ಮನನ.
3) ಪ್ರಾಯೋಗಿಕ ಯೋಗ್ಯವಾದದ್ದನ್ನು ಹೆಚ್ಚಾಗಿ ಕಲಿಯುವುದು ಹಾಗೂ ಅಭ್ಯಾಸ ಮಾಡುವುದು.
4) ಶಿಕ್ಷಕರಲ್ಲಿ ಪೂರ್ಣ ವಿಶ್ವಾಸ, ಶ್ರದ್ಧೆ ಹಾಗೂ ಗೌರವ.

**■ ಏಕಾಗ್ರತೆಯನ್ನು ಹೇಗೆ ಹೆಚ್ಚಿಸಿಕೊಳ್ಳುವುದು?**

ನನ್ನ ಅನುಭವದಲ್ಲಿ ಸಂಸ್ಕೃತದ ಜ್ಞಾನದಿಂದ ತುಂಬಾ ಅನುಕೂಲ ವಾಗಿದೆ. "ಸಂಸ್ಕೃತ ಭಾರತಿ" ಸಂಘದಿಂದ ಸಂಸ್ಕೃತ ಕಲಿಯಲು ಪ್ರಾರಂಭಿಸಿದ ನಂತರ ನನ್ನ ಏಕಾಗ್ರತೆ ವೃದ್ಧಿಸಿದೆ. ಸಂಸ್ಕೃತ ಭಾಷೆಯು ಎಷ್ಟು ವೈಜ್ಞಾನಿಕವಾಗಿದೆಯೆಂದರೆ, ಅದರ ಕಲಿಕೆ ನಮ್ಮ ಮೆದುಳಿನ ಜೀವಾಣುಗಳನ್ನು ಚೈತನ್ಯಪೂರಕವನ್ನಾಗಿ ಮಾಡುತ್ತದೆ. ಇದರಿಂದಾಗಿ ನನ್ನ ಗ್ರಹಣ ಶಕ್ತಿ ಹೆಚ್ಚಿದೆ.

**■ ಆದರ್ಶ ವಿದ್ಯಾರ್ಥಿಯ ದಿನಚರಿ ಹೇಗಿರಬೇಕು?**

1) ಬ್ರಾಹ್ಮೀ ಮುಹೂರ್ತದಲ್ಲಿ ಅಂದರೆ 4 ರಿಂದ 5 ಘಂಟೆಗಳ ಮಧ್ಯೆ ಏಳುವುದು.
2) ಲಘು ವ್ಯಾಯಾಮ/ ಆಸನಾಭ್ಯಾಸ/ ಸೂರ್ಯ ನಮಸ್ಕಾರ.
3) ಸ್ನಾನಾದಿ ಸ್ವಚ್ಛ ಕಾರ್ಯ, ಉಪಹಾರದ ನಂತರ ಶಾಲೆಗೆ ತೆರಳುವುದು.
4) ಶಾಲೆಯ ನಂತರ ಕ್ರೀಡೆ, ಸಂಜೆ ಪುನ: ಪಠನೆ.
5) ದಿನಕ್ಕೆ 6 ಘಂಟೆಗಳ ಕಾಲ ನಿದ್ರೆ.

**■ ನಿಮ್ಮತಂದೆ–ತಾಯಿಯ ಪರಿಚಯ ಹಾಗೂ ಅವರ ಪ್ರೋತ್ಸಾಹದ ಬಗ್ಗೆ ತಿಳಿಸಿ.**

ನನ್ನ ತಂದೆ ಶ್ರೀ. ಕೆ.ಎ. ರವಿ, ಬೆವಿಕಂ ನಿಗಮ ಕಛೇರಿಯ ಕೇಂದ್ರಿಯ ದೂರು ವಿಭಾಗ (ಸಿಸಿಡಿ) ಇಲ್ಲಿ ಕಿರಿಯ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ತಾಯಿ ಶ್ರೀಮತಿ ನಳಿನಾಕ್ಷಿ, ಬೆಂಗಳೂರಿನ ಪೋಲಿಸ್ ಕಮೀಷನರ್ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನನ್ನ ಯಶಸ್ಸಿನಲ್ಲಿ ಸಿಂಹಪಾಲು ಅವರದ್ದಾಗಿದೆ. ಹೊತ್ತು ಹೊತ್ತಿಗೆ ನನ್ನ ಊಟ ತಿಂಡಿ ಹಾಗೂ ಆರೋಗ್ಯದ ಕಡೆಗೆ ಗಮನ, ವಿದ್ಯಾಭ್ಯಾಸಕ್ಕೆ ಪೂರಕ ವಾತಾವರಣ ಹಾಗೂ ನನ್ನ ತುಂಬು ಕುಟುಂಬದ ಸಹಕಾರ ನನ್ನ ಈ ಸಾಧನೆಗೆ ಕಾರಣ. ತಾಯಿ–ತಂದೆ ಉದ್ಯೋಗದಲ್ಲಿರುವುದರಿಂದ ನನ್ನ ಅಕ್ಕ, ತಾತ, ಅಜ್ಜಿಯವರ ಮಾರ್ಗದರ್ಶನವೆಂಬುದು ಇಲ್ಲಿ ನಾನು ನೆನೆಯಲೇಬೇಕು. ಹೀಗೆ ಎಲ್ಲರ ಸಹಕಾರ ಹಾಗೂ ಪೂರ್ಣ ಪ್ರೋತ್ಸಾಹದಿಂದ ಯಾವುದೇ ತೊಂದರೆ ಇಲ್ಲದೆ ನನ್ನ ವಿದ್ಯಾಭ್ಯಾಸ ಜೀವನ ಸಾಗುತ್ತಿದೆ.

**■ ಸಾಮಾನ್ಯವಾಗಿ 10ನೇ ತರಗತಿಯ ವಿದ್ಯಾರ್ಥಿಗಳು ಟ್ಯೂಷನ್ನಿಗೆ ಹೋಗುವುದು ಸಾಂಪ್ರದಾಯವಾಗಿದೆ. ನೀವು ಎಲ್ಲಿ ಕಲಿತದ್ದು?**

ನಾನು ಯಾವ ಟ್ಯೂಷನ್ನಿಗೂ ಹೋಗಲಿಲ್ಲ. ನನ್ನ ಚಿನ್ಮಯ ವಿದ್ಯಾಲಯ ಶಾಲೆಯ ಶಿಕ್ಷಕರು ಅತ್ಯುತ್ತಮವಾಗಿ ಪಾಠ ಮಾಡಿದರು ಮತ್ತು ಪ್ರೋತ್ಸಾಹಿಸಿದರು. ವಿದ್ಯಾರ್ಥಿಗಳ ಬೆಳವಣಿಗೆಯೇ ಅವರ ಧ್ಯೇಯವಾಗಿದೆ.

**■ ಅನ್ಯ ವಿದ್ಯಾರ್ಥಿಗಳಿಗೆ ನಿಮ್ಮ ಸಂದೇಶವೇನು?**

ಪರೀಕ್ಷೆಯ ಭೀತಿಯನ್ನು ಬಿಟ್ಟು ಜ್ಞಾನ ವೃದ್ಧಿಗಾಗಿ ಶ್ರಮಿಸಿ. ಅಂಕಗಳು ನೆರಳಿನಂತೆ ನಿಮ್ಮನ್ನು ಹಿಂಬಾಲಿಸುತ್ತವೆ.

**■ ನಿಮ್ಮ ಮುಂದಿನ ಗುರಿಯೇನು? ಮುಂದಿನ ವಿದ್ಯಾಭ್ಯಾಸ?**

ಉತ್ತರ: ಮೂಲ ವಿಜ್ಞಾನದಲ್ಲಿ ಅಧ್ಯಯನ ಮಾಡಿ ಸಂಶೋಧಕನಾಗಬೇಕೆಂಬ ಗುರಿಯಿದೆ. ಆದರೆ, ನಮ್ಮ ಭಾರತದ ವೇದಗಳು ಸರ್ವವನ್ನೂ ಉಪದೇಶಿಸಿದೆ. ಆದ್ದರಿಂದ ಸಂಶೋಧನೆ ಎನ್ನುವುದು ಅಹಂಕಾರವಾಗುತ್ತದೆ. ನಮ್ಮ ಜ್ಞಾನ ಭಂಡಾರವನ್ನು ಅಧ್ಯಯನ ಮಾಡಿ ವಿಜ್ಞಾನ ವಿಷಯಗಳನ್ನು ಕ್ರೋಢೀಕರಿಸಿ ಜಗತ್ತಿನ ಗುಣಮಟ್ಟವನ್ನು ವೃದ್ಧಿಸುವುದು ನನ್ನ ಹಂಬಲ.

**2015–16ರ ಸಾಲಿನ 10ನೇ ತರಗತಿ (ಐಸಿಎಸ್‌ಇ) ಪರೀಕ್ಷೆಯಲ್ಲಿ ದೇಶಕ್ಕೆ 2ನೇ ರ್‍ಯಾಂಕ್ ಪಡೆದು ತೇರ್ಗಡೆಯಾಗಿರುವ, ಬೆಸ್ಕಾಂ ಕಿರಿಯ ಇಂಜಿನಿಯರ್ ಶ್ರೀ. ರವಿ ಅವರ ಪುತ್ರ ಸುದರ್ಶನ. ಆರ್. ಅವರೊಂದಿಗೆ ಪ್ರಧಾನ ವ್ಯವಸ್ಥಾಪಕರು (ಗ್ರಾಹಕ ಸಂಬಂಧ) ರವರು ನಡೆಸಿದ ಸಂದರ್ಶನದ ಆಯ್ದ ಅಂಶಗಳು. ಸುದರ್ಶನರವರ ಈ ಸಾಧನೆಗೆ ಬೆಸ್ಕಾಂ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅವರ ಮುಂದಿನ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸುತ್ತದೆ.**

## Colorful Rainbow

One day I was lying down on the grass because I
was too tired,
I came from my class when suddenly it rained;
I ran to my house,
when I saw sheeps, dogs, cats, horses and Cows
run to their house;
I stayed in my house reading a book,
when my mom told look!
I saw outside, I saw something shining powerfully,
I went more close and saw carefully,
it was a colorful rainbow shining beautifully!

Kum. Veruschka, 3rd Std. (D/o. Sri. Pankaj Kumar Pandey, IAS)

## My Dream is that

My dream is that I'll soar up high
Wearing my pair of wings,
When I see a magical ring fall down,
I'll wear that ring and get a crown;
Then I recognized, I am becoming a queen,
A queen whomI have seen
and then I recognized I am becoming Queen Victoria.
I become happy, I have to touch the sun,
I am having so much fun,
then I run to my house because I am late
I went to my house and ate,
Then I slept and heard a sound wake up.
I woke, it was a dream !!!

# ರಾಷ್ಟ್ರಕವಿ ಕುವೆಂಪು



ಕನ್ನಡ ಸಾಹಿತ್ಯಕ್ಕೆ ಪ್ರಥಮ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕುವೆಂಪು ಅಚ್ಚ ಮಲೆನಾಡಿನ ಮೂಲದವರು. 1904 ರ ಡಿಸೆಂಬರ್ 29 ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು. ತಂದೆ ವೆಂಕಟಪ್ಪ ಗೌಡರು, ತಾಯಿ ಸೀತಮ್ಮ. ಕುಪ್ಪಳ್ಳಿಯ ವೆಂಕಟಪ್ಪ ಪುಟ್ಟಪ್ಪ ಅವರು ತಮ್ಮ ಕಾವ್ಯನಾಮ "ಕುವೆಂಪು' ಹೆಸರಿನಲ್ಲಿ ಪ್ರಖ್ಯಾತಿಯನ್ನು ಪಡೆದವರು.

ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಆರಂಭಿಸಿದ ಅವರು ನಂತರ ಪ್ರೌಢಶಾಲೆಯಿಂದ ಎಂ.ಎ. ಪದವಿಯವರೆಗೂ ಮೈಸೂರಿನಲ್ಲಿ ಓದಿದರು. ನಂತರ 1929 ರಲ್ಲಿ ಪ್ರಾಧ್ಯಾಪಕರಾಗಿ ಮೈಸೂರಿನ ಮಹಾರಾಜಾ ಕಾಲೇಜನ್ನು ಸೇರಿದ ಅವರು, 1955 ರಲ್ಲಿ ಅದೇ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಂತರ ಕುಲಪತಿಯಾಗಿ ನಿವೃತ್ತರಾದರು. ವಿಶ್ವವಿದ್ಯಾಲಯವೊಂದರ ಕುಲಪತಿಯಾದ ಮೊದಲ ಕನ್ನಡಿಗ ಕುವೆಂಪುರವರು.


ಆಧ್ಯಾತ್ಮ, ವೈಚಾರಿಕತೆ, ಗಾಢವಾದ ನಿಸರ್ಗ ಪ್ರೀತಿಗಳಲ್ಲಿ ಬೇರೂರಿರುವ ಅವರ ಸಾಹಿತ್ಯ ನಮ್ಮ ಪರಂಪರೆಯನ್ನು, ಸಾಮಾನ್ಯ ಜನರ ಬದುಕನ್ನು ನಿರ್ದೇಶಿಸಿದಂತೆಯೇ ಶೋಷಣೆಗೆ ಒಳಗಾದ ಪರಂಪರೆಯನ್ನು ತೀಕ್ಷ್ಣ ಹಾಗೂ ಚಿಕಿತ್ಸಕ ದೃಷ್ಟಿಯಿಂದ ಕಂಡಿದೆ. ವಿಶ್ವಮಾನವ ಸಂದೇಶವನ್ನು ನೀಡಿದ ಫಲವಾಗಿ ಅವರಿಗೆ 'ವಿಶ್ವಮಾನವ" ಎಂಬ ಬಿರುದೂ ಇದೆ.

1964 ರಲ್ಲಿ ರಾಜ್ಯ ಸರ್ಕಾರದಿಂದ "ರಾಷ್ಟ್ರಕವಿ" ಬಿರುದಿನ ಗೌರವ ಪಡೆದ ಅವರಿಗೆ 1968 ರಲ್ಲಿ ಅವರ ಮೇರು ಕೃತಿ "ಶ್ರೀ ರಾಮಾಯಣ ದರ್ಶನಂ"ಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿತು.

ಸುಮಾರು 70 ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ ಕುವೆಂಪು ಅವರ ಪ್ರಮುಖ ಕೃತಿಗಳು. ಕಾನೂರು ಹೆಗ್ಗಡಿತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿ) ಬೆರಳ್ಗೆ ಕೊರಳ್, ಶೂದ್ರ ತಪಸ್ವಿ, ಸ್ಮಶಾನ ಕುರುಕ್ಷೇತ್ರ, ರಕ್ತಾಕ್ಷಿ, ಬಿರುಗಾಳಿ (ನಾಟಕಗಳು), ಶ್ರೀ ರಾಮಾಯಣ ದರ್ಶನಂ (ಮಹಾಕಾವ್ಯ), ಕೊಳಲು, ಅನಿಕೇತನ, ಜೇನಾಗುವಾ, ಪಕ್ಷಿಕಾಶಿ, ಚಿತ್ರಾಂಗದಾ, ಇತ್ಯಾದಿ (ಕವನ ಸಂಕಲನಗಳು), ದ್ರೌಪದಿಯ ಶ್ರೀಮುಡಿ (ವಿಮರ್ಶೆ), ಸ್ವಾಮಿ ವಿವೇಕಾನಂದ, ಶ್ರೀ ರಾಮಕೃಷ್ಣ ಪರಮಹಂಸ (ಜೀವನ ಚರಿತ್ರೆ).

# ಗೆಣಸಿನ ಮಹಿಮೆ

ಗೆಣಸು ಪುಷ್ಟಿದಾಯಕ ಆಹಾರಗಳಲ್ಲೊಂದು. ಇದನ್ನು ಬೇಯಿಸಿ ಇಲ್ಲವೆ ಸುಟ್ಟು ತಿನ್ನುವುದಲ್ಲದೆ ಇದರಿಂದ ರೊಟ್ಟಿಗಳನ್ನು ತಯಾರಿಸುತ್ತಾರೆ. ನಮ್ಮ ದೇಹದ ರಕ್ತಕಣಗಳ ಚಯಾಪಚಯ ಮತ್ತು ಅನೇಕ ದೈಹಿಕ ಕ್ರಿಯೆಗಳಿಗೆ ಬಿ6 ಪೋಷಕಾಂಶ ಹೆಚ್ಚು ಇರಬೇಕು. ಹೀಗಾಗಿ ವಿಶೇಷವಾಗಿ ಸಿಹಿ ಗೆಣಸು ತಿಂದರೆ ದೇಹದ ಚಟುವಟಿಕೆ ಸರಾಗವಾಗಿ ನಡೆಯುತ್ತದೆ ಎಂದು ಅಮೆರಿಕದ ಲೂಸಿಯಾನ ವಿಶ್ವವಿದ್ಯಾನಿಲಯದ ವಿಲ್ಮರ್ ಬರೇರಾ ಮತ್ತು ಡೇವಿಡ್ ಪೀಚ್ ಹೇಳಿದ್ದಾರೆ.



ಈ ಅಧ್ಯಯನಕ್ಕಾಗಿ ಬಿ6 ಪೋಷಕಾಂಶ ಹೆಚ್ಚಿರುವ ಕ್ಯಾರೆಟ್, ಬಾಳೆಹಣ್ಣು, ಎಲೆಕೋಸು ಸೇರಿದಂತೆ ವಿವಿಧ ತರಕಾರಿ ಮತ್ತು ಹಣ್ಣುಗಳನ್ನು ಪರಿಗಣಿಸಲಾಗಿತ್ತು. ಆದರೆ ಈ ತರಕಾರಿ ಮತ್ತು ಹಣ್ಣುಗಳಿಗಿಂತ ಸಿಹಿಗೆಣಸಿನಲ್ಲೇ ಅತ್ಯಧಿಕ ಪೋಷಕಾಂಶಗಳು ಇವೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಇವರ ಸಂಶೋಧನಾ ಅಧ್ಯಯನದ ವರದಿ ಜರ್ನಲ್ ಹಾರ್ಟ್‌ಸೈನ್ಸ್ ನಲ್ಲಿ ಪ್ರಕಟಗೊಂಡಿದೆ.

ಗೆಣಸಿನಲ್ಲಿ ನೂರಾರು ಬಗೆಗಳಿವೆ. ಗಡ್ಡೆಯ ಗಡಸುತನದ ಆಧಾರದ ಮೇಲೆ ಮೃದು ಮತ್ತು ಗಟ್ಟಿ ಎಂದು ಎರಡು ಮುಖ್ಯ ಪಂಗಡಗಳಾಗಿ ವಿಭಾಗಿಸಲಾಗಿದೆ. ಗೆಣಸಿನ ಬಳ್ಳಿಯ ಬೆಳವಣಿಗೆಯ ಕ್ರಮವನ್ನು ಅನುಸರಿಸಿ ವಿಭಾಗಿಸುವುದೂ ಇದೆ. ಆದರೆ ಗಡ್ಡೆಗಳ ಬಣ್ಣದ ಆಧಾರದ ಮೇಲೆ ಹಲವಾರು ಬಗೆಗಳಾಗಿ ವಿಂಗಡಿಸುವುದೇ ವಾಡಿಕೆಯಲ್ಲಿರುವ ಕ್ರಮ. ಗಡ್ಡೆಗಳ ಬಣ್ಣ ಬಿಳಿಯಿಂದ ಹಿಡಿದು ಹೊಂಬಣ್ಣ, ಕಿತ್ತಳೆ, ಕೆಂಪುಮಿಶ್ರಿತ ಊದಾ ಬಣ್ಣದ ವರೆಗೂ ವ್ಯತ್ಯಾಸವಾಗುತ್ತದೆ. ಭಾರತದಲ್ಲಿ ಇರುವ ಪ್ರಭೇದಗಳೆಂದರೆ;

**ಪುಸಾ ಸಫೇದ್:** ಇದು ಮೂಲತಃ ತೈವಾನಿನಿಂದ ಪಡೆಯಲಾದ ಬಗೆ. ಬಿಳಿಯ ಬಣ್ಣದ ಗಡ್ಡೆಗಳನ್ನು ಉತ್ಪಾದಿಸುತ್ತದೆ. ಅಧಿಕ ಇಳುವರಿಗೂ ಗಡ್ಡೆಗಳ ಉತ್ಕೃಷ್ಟತೆಗೂ ಹೆಸರಾಗಿದೆ.

**ಪುಸಾ ಲಾಲ್:** ಜಪಾನಿನಿಂದ ತಂದ ಗೆಣಸಿನಿಂದ ಅಡ್ಡತಳಿಯೆಬ್ಬಿಸಿ ಪಡೆದ ಬಗೆಯಿದು. ಇದರ ಗಡ್ಡೆಗಳ ಬಣ್ಣ ಕೆಂಪು. ಬಹಳಕಾಲ ಕೆಡದಂತೆ ಸಂಗ್ರಹಿಸಿಡಬಹುದು.

**ಪುಸಾ ಸುನೇರಿ:** ಇದು ನಸುಕಿತ್ತಳೆ ಬಣ್ಣದ ಗಡ್ಡೆಗಳನ್ನು ಬಿಡುತ್ತದೆ. ಗಡ್ಡೆಗಳಲ್ಲಿ ಅಧಿಕ ಪರಿಮಾಣದಲ್ಲಿ ಕ್ಯಾರೊಟೀನ್ ಇದೆ. ಈ ಮೂರು ಮುಖ್ಯ ಬಗೆಗಳಲ್ಲದೆ ಭಾರತದ ವಿವಿಧ ರಾಜ್ಯಗಳಲ್ಲಿ ಇನ್ನೂ ಹಲವು ರೀತಿಯ ಗೆಣಸುಗಳಿವೆ.

ನಮ್ಮಲ್ಲಿ ಹೆಚ್ಚಾಗಿ ಸಿಹಿ ಗೆಣಸು ಪ್ರಚಲಿತದಲ್ಲಿದೆ. ಅವುಗಳಿಂದ ಪ್ರಯೋಜನಗಳು ಹಲವಾರು. ಅವುಗಳೆಂದರೆ;

- ಇದು ಸೌಂದರ್ಯವರ್ಧಕ. ಸಿಹಿಗೆಣಸುಗಳನ್ನು ಬೇಯಿಸಿರುವ ನೀರಿನಿಂದ ಮುಖವನ್ನು ತೊಳೆಯುತ್ತಾ ಬಂದರೆ ಮುಖದಲ್ಲಿರುವ ಕಲೆಗಳು, ರಂಧ್ರಗಳು ಮತ್ತು ದೂಳು ನಿವಾರಣೆಯಾಗುತ್ತದೆ. ಇದರಲ್ಲಿರುವ ವಿಟಮಿನ್ ಸಿ ಅಂಶ ಹೆಚ್ಚಾಗಿದೆ. ಇದು ಚರ್ಮಕ್ಕೆ ಅಂದ ಹೆಚ್ಚಿಸಲು ಸಹಕಾರಿ.
- ಅಸ್ತಮಾ, ಸಂಧಿವಾತ ಮತ್ತು ಅರ್ಥರಿಟಿಸ್ ಸಮಸ್ಯೆಗಳಿಗೆ ಉಪಶಮನ ನೀಡುತ್ತದೆ. ಜೊತೆಗೆ ವಯಸ್ಸಾದಂತೆ ಕಾಣುವುದನ್ನು ತಡೆಯುತ್ತದೆ.
- ಗೆಣಸಿನ ಗಡ್ಡೆಗಳನ್ನು ತೆಗೆದ ಮೇಲೆ ಉಳಿಯುವ ಎಲೆ, ಕಾಂಡ ಇತ್ಯಾದಿಗಳನ್ನು ದನಕರುಗಳಿಗೆ ಮೇವಾಗಿ ಉಪಯೋಗಿಸಬಹುದು.
- ಸಿಹಿಗೆಣಸುಗಳಲ್ಲಿ ಸಕ್ಕರೆ ಅಂಶ ಸ್ವಾಭಾವಿಕವಾಗಿ ಇದೆ. ಅದು ಮಧುಮೇಹವನ್ನು ಕಡಿಮೆ ಮಾಡಿ, ಇನ್ಸುಲಿನ್ ಪ್ರಮಾಣವನ್ನು ಸ್ಥಿರವಾಗಿಡಲು ಸಹಕಾರಿಯಾಗಿದೆ. ಅಷ್ಟೇ ಅಲ್ಲದೇ ರಕ್ತದಲ್ಲಿ ಸಕ್ಕರೆ ಮಟ್ಟವನ್ನು ಕಾಯ್ದುಕೊಳ್ಳುತ್ತದೆ.

# ಗ್ರಾಹಕ ಸಲಹಾ ಸಮಿತಿಯ ಚಿತ್ರಗಳು


ಬಂಗಾರಪೇಟೆ ಉಪವಿಭಾಗ


ದಾವಣಗೆರೆ ನಗರ ಉಪವಿಭಾಗ–2


ದಾವಣಗೆರೆ ಗ್ರಾಮೀಣ ಉಪವಿಭಾಗ


ಹರಪನಹಳ್ಳಿ ಉಪವಿಭಾಗ



ಹೊಸದುರ್ಗ ಉಪವಿಭಾಗ


ಮಾಲೂರು ಉಪವಿಭಾಗ


ರಾಮನಗರ ಗ್ರಾಮೀಣ ಉಪವಿಭಾಗ


W4 ಉಪವಿಭಾಗ



## ಸಂಪಾದಕ ಮಂಡಳಿ

| | | |
|---|---|---|
| **ಶ್ರೀ ಪಂಕಜ್‌ಕುಮಾರ್ ಪಾಂಡೆ,** | ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಎಚ್. ನಾಗೇಶ್,** | ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀ ಡಾ. ಸಿ.ಆರ್. ಚೇತನ್** | ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** | ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀಮತಿ ಗೀತಾ ಚೌಹ್ಹಾಣ್,** | ಸಾರ್ವಜನಿಕ ಸಂಪರ್ಕ ಅಧಿಕಾರಿ | **ಸಂಚಾಲಕರು** |
| **ಶ್ರೀ ಎಸ್.ಕೆ. ನಾಗರಾಜ್,** | ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಆರ್.ಎಚ್. ಲಕ್ಷ್ಮೀಪತಿ,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** | ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ದಾಸ್‌ಪ್ರಕಾಶ್,** | ಕವಿಪ್ರನಿನಿ ಪ. ಜಾತಿ ಮತ್ತು ಪ. ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** | ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ ವಿಳಾಸ:

**ಸಾರ್ವಜನಿಕ ಸಂಪರ್ಕಾಧಿಕಾರಿ, ನಿಗಮ ಕಾರ್ಯಾಲಯ, ನೆಲಮಹಡಿ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **bescommagazine@gmail.com**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at Shubhodaya Printers, Mob: 99452 77806